# ಸಾವಿತ್ರಿ ಆದ ಸುಸಾನ್ನ

ವಿದೇಶಿಗರೆಂದರೆ ಧಾವಂತದ ಬದುಕಲ್ಲಿ ಓಡುವ ಜನ. ಐಶಾರಾಮಿ ಜೀವನ ನಡೆಸುವವರು. ಇಹ–ಪರಗಳ ಅರಿಯದೆ ದುಡಿಮೆಗಷ್ಟೇ ಆದ್ಯತೆ ನೀಡುವವರು.. ವಿಶ್ರಾಂತಿ ಬಯಸದವರು... ಹೀಗೆ ಹಲವು ಬಗೆಯ ಕಲ್ಪನೆಗಳು ಭಾರತೀಯರದ್ದು. ಮೇಲ್ನೋಟಕ್ಕೆ ನಿಜವೆನಿಸಿದರೂ, ಬಹುತೇಕರು ಇದರಿಂದ ಹೊರತಾಗಿದ್ದಾರೆ. ದುಡಿಮೆಯ ಜತೆಗೆ ಶಾಂತಿ– ನೆಮ್ಮದಿ ಅರಸುವ ವಿದೇಶಿಗರ ಸಂಖ್ಯೆ ಬೆಟ್ಟದಷ್ಟಿದೆ. ಆಧ್ಯಾತ್ಮದೊಂದಿಗೆ ನಂಟು ಬೆಸೆದುಕೊಂಡು ಅದಕ್ಕಾಗಿ ಜೀವನವೇ ಮುಡುಪಾಗಿಡುವವರ ಸಂಖ್ಯೆಯೂ ದೊಡ್ಡದು.

ಸ್ವಿಝರ್ಲೆಂಡ್‌ನ ಸುಸಾನ್ನ ಕೂಡ ಆಧ್ಯಾತ್ಮದ ನೆಲೆಯಲ್ಲಿ ಬದುಕಿಗೆ ಅರ್ಥ ಕಂಡುಕೊಳ್ಳಲು 15 ವರ್ಷಗಳಿಂದ ಭಾರತದೊಂದಿಗೆ ನಂಟು ಬೆಳೆಸಿಕೊಂಡಿದ್ದಾರೆ. 2 ವರ್ಷಕ್ಕೊಮ್ಮೆ ನವರಾತ್ರಿ ಸಮಯದಲ್ಲಿ ಮೈಸೂರಿಗೆ ಬಂದು 2– 3 ತಿಂಗಳು ಇಲ್ಲೇ ಕಳೆಯುತ್ತಾರೆ. 57ರ ಹೊಸ್ತಿಲಲ್ಲಿರುವ ಸುಸಾನ್ನ ಅವರಿಗೆ ಹರೆಯದರಲ್ಲಿ ದುಡಿಮೆಯೇ ಆದ್ಯತೆಯಾಗಿತ್ತು. ಹೆಚ್ಚು ಹಣ ಗಳಿಸಬೇಕು, ಐಶಾರಾಮಿ ಜೀವನ ನಡೆಸಬೇಕು ಎಂದು ಅದೆಷ್ಟೋ ಕನಸು ಕಟ್ಟಿಕೊಂಡಿದ್ದರು. ಆದರೆ, ಒಮ್ಮೆಲೆ ಆಧ್ಯಾತ್ಮದತ್ತ ಒಲವು ಬೆಳೆಸಿಕೊಂಡು 'ಜೀವನ ನಶ್ವರ' ಎಂಬ ನಿಲುವಿಗೆ ಬಂದರು. ಒಮ್ಮಿಂದೊಮ್ಮೆಲೆ ಈ ನಿಲುವು ತಳೆಯಲು ಕಾರಣವೂ ಉಂಟು. ಒಮ್ಮೆ ತಮ್ಮ ದೇಶದಲ್ಲಿ ಭಾರತೀಯ ಸ್ವಾಮೀಜಿಯೊಬ್ಬರ ಪ್ರವಚನ ಅವರ ಮೇಲೆ ಗಾಢ ಪ್ರಭಾವ ಬೀರಿತಂತೆ. ಆಗ ಮನದಲ್ಲಿ ಅನೇಕ ಪ್ರಶ್ನೆಗಳು ಕಾಡತೊಡಗಿದವು. ಹುಟ್ಟು– ಸಾವಿನ ಕುರಿತು ಮಂಥನ ಶುರುವಾಯಿತು. ಅಂದೇ ತಾವು ದುಡಿಯುತ್ತಿದ್ದ ಕಂಪೆನಿಗೆ ಅಲ್ಪಾವಧಿ ರಜೆ ಹಾಕಿ ಆಧ್ಯಾತ್ಮ ಕುರಿತ ಅಧ್ಯಯನದಲ್ಲಿ ತೊಡಗಿದರು. ಕೆಲ ಚಿಂತಕರ ಪುಸ್ತಕಗಳು ಅವರನ್ನು ಭಾರತದತ್ತ ಮುಖ ಮಾಡಲು ಪ್ರೇರೇಪಿಸಿದವು. ಅಲ್ಲದೆ ಭಕ್ತಿ ಪ್ರಧಾನ ಗೀತೆಗಳು ಅವರನ್ನು ಬಹುವಾಗಿ ಆಕರ್ಷಿಸಿದವು. ಅಲ್ಲಿಯವರೆಗೂ ಶಾಸ್ತ್ರೀಯ ಸಂಗೀತ ಮಾತ್ರ ಆಲಿಸುತ್ತಿದ್ದ ಸುಸಾನ್ನ ಅವರ ಕಿವಿಗಳು ಭಕ್ತಿಗೀತೆಗಳನ್ನು ಅಪ್ಪಿಕೊಂಡವು. ಭಜನೆ, ವಚನಗಳ ಸಿ.ಡಿ.ಯನ್ನು ಕೊಂಡು ಆಲಿಸಿ ಭಾವಪರವಶರಾದರು.

ಆಧ್ಯಾತ್ಮದ ನೆಲೆವೀಡು ಭಾರತವನ್ನು ನೋಡಲೇಬೇಕು ಎಂದು ನಿರ್ಧರಿಸಿ 1999ರಲ್ಲಿ ಮೊದಲ ಬಾರಿಗೆ ಕೌತುಕಗಳ ಮೂಟೆ ಹೊತ್ತು ಇಲ್ಲಿಗೆ ಬರುತ್ತಾರೆ. ಮೈಸೂರಿನ ಸುತ್ತಲಿನ ದೇಗುಲ, ಮಠ, ಆಶ್ರಮಗಳಿಗೆ ಅಡಿ ಇಡುತ್ತಿದ್ದಂತೆ ಅವರ ಮೈಮನಗಳು ರೋಮಾಂಚನಗೊಳ್ಳುತ್ತವೆ. ಭಕ್ತಿಯ ಪರಾಕಾಷ್ಠೆಯಲ್ಲಿ ಮಿಂದೇಳುತ್ತಾರೆ. ಭಾರತ ಎಂದರೆ ಕಲ್ಪನೆಗೂ ನಿಲುಕದ ತಾಣವಾಗಿದ್ದ ಅವರಿಗೆ, ಕಣ್ಣಾರೆ ಕಂಡು ಮಂತ್ರಮುಗ್ಧರಾದರಂತೆ. ಆದರೆ, ಅವರಿಗೆ ಮೊದಲು ಎದುರಾದದ್ದು ಭಾಷೆಯ ತೊಡಕು. 'ಇಲ್ಲಿಯೂ ಇಂಗ್ಲಿಷ್ ಮಾತನಾಡುವವರು ಇದ್ದಾರೆ. ಆದರೆ ಭಾರತೀಯರು ಮಾತನಾಡುವ ಇಂಗ್ಲಿಷ್ ಶೈಲಿಗೂ ಸ್ವಿಡ್ಜರ್ಲೆಂಡ್‌ನ ಶೈಲಿಗೂ ಅಜಗಜಾಂತರ. ಹಾಗಾಗಿ, ಇಲ್ಲಿ ಹೊಂದಿಕೊಳ್ಳಲು ಸಾಕಷ್ಟು ಕಷ್ಟಪಟ್ಟೆ. ಇಲ್ಲಿನ ಸಂಸ್ಕೃತಿಯೂ ನನ್ನನ್ನು ಬೆರಗುಗೊಳಿಸಿತ್ತು' ಎನ್ನುತ್ತಾರೆ ಸುಸಾನ್ನ.

'ಸಚ್ಚಿದಾನಂದ ಆಶ್ರಮದಲ್ಲಿ ಹಲವಾರು ಭಕ್ತರಿದ್ದರು. ನನ್ನಂತೆಯೇ ವಿದೇಶದಿಂದ ಬಂದವರೂ ಇದ್ದರು. ಆದರೆ, ಅವರದೇ ಕಾರ್ಯದಲ್ಲಿ ತಲ್ಲೀನರಾಗಿರುತ್ತಿದ್ದರು. ಆಗ ಭಾರತದ ಬಗ್ಗೆ ಬೇಸರದಿಂದಲೇ ದೇಶಕ್ಕೆ ತೆರಳಿದೆ' ಎನ್ನುವ ಸಾಸಾನ್ನ, ಆಧ್ಯಾತ್ಮದ ಬಗ್ಗೆ ಇನ್ನಷ್ಟು ಅಧ್ಯಯನ ಮಾಡಿ ಮತ್ತೆ ಮೈಸೂರಿಗೆ ಬರುತ್ತಾರೆ. ಎರಡನೇ ಬಾರಿಯ ಭಾರತದ ಪ್ರವಾಸ ಅವರನ್ನು ನಿರಾಶೆಗೊಳಿಸಲಿಲ್ಲ. ಅವರ ನಿರೀಕ್ಷೆಗಳು ಹುಸಿಯಾಗಲಿಲ್ಲ. ಇತರರೊಂದಿಗೆ ತಾವೂ ಬೆರೆತು ಅವರಲ್ಲೊಬ್ಬರಾದರು. ಯೋಗ– ಧ್ಯಾನ, ಪ್ರಾಣಾಯಾಮ ನಿತ್ಯದ ಬದುಕಿನ ಭಾಗಗಳಾದವು. ಇಲ್ಲಿನ ಇಂಗ್ಲಿಷ್ ಭಾಷೆಯನ್ನು ನಿಧಾನಕ್ಕೆ ಅರ್ಥೈಸಿಕೊಳ್ಳಲು ಶುರುಮಾಡಿದರು. ಎಲ್ಲರನ್ನೂ ವಿಶ್ವಾಸದಿಂದ ಕಾಣತೊಡಗಿದರು. ಇತರ ಭಕ್ತರ ಮನಗೆದ್ದರು. ಆ ಪ್ರೀತಿ– ವಿಶ್ವಾಸಕ್ಕಾಗಿ ಅನೇಕರು ಅವರನ್ನು 'ಸಾವಿತ್ರಿ' ಎಂದೇ ಕರೆಯುತ್ತಾರೆ. ಸುಸಾನ್ನ



ಸ್ವಿಝರ್ಲೆಂಡ್‌ನಿಂದ ಬಂದ ಸುಸಾನ್ನ

ಭಾರತಕ್ಕೆ ಬಂದೊಡನೇ ಸಾವಿತ್ರಿಯಾಗುತ್ತಾರೆ. ಅಲ್ಲದೇ, ಮೊದಲ ಹೆಸರಿಗಿಂತ ಸಾವಿತ್ರಿ ಅಂತ ಕರೆಸಿಕೊಳ್ಳುವುದೇ ಅವರಿಗೆ ಹೆಚ್ಚು ಇಷ್ಟ.

ಸ್ವಿಝರ್ಲೆಂಡ್‌ನಲ್ಲಿ ಥೆರಪಿಸ್ಟ್ ಆಗಿ ಕಾರ್ಯ ನಿರ್ವಹಿಸುತ್ತಿರುವ ಸುಸಾನ್ನ, ಭಾರತೀಯರ ಸ್ನೇಹಪರತೆಯನ್ನು ಮೆಚ್ಚುತ್ತಾರೆ. 'ಕಷ್ಟದಲ್ಲಿರುವವರಿಗೆ ಇಲ್ಲಿ ಬಹುಬೇಗ ಸ್ಪಂದನೆ ಸಿಗುತ್ತದೆ. ಇಲ್ಲಿಗೆ ಬಂದರೆ ಕುಟುಂಬದ ಸದಸ್ಯರೊಡನೆ ಒಡನಾಡಿದ ಅನುಭವ ಸಿಗುತ್ತದೆ' ಎನ್ನುವ ಸುಸಾನ್ನ, ತಮ್ಮ ದೇಶದ ಬಗ್ಗೆ ಖೇದ ವ್ಯಕ್ತಪಡಿಸುತ್ತಾರೆ.

'ಅಲ್ಲಿ ಪ್ರತಿಯೊಂದಕ್ಕೂ ಇದು ಹೀಗೇ ಇರಬೇಕು ಎಂದು ನಿರ್ದಿಷ್ಟ ಚೌಕಟ್ಟು ಹಾಕಿಕೊಂಡಿದ್ದಾರೆ. ಹಾಗಾಗಿ, ಅಲ್ಲಿ ಕ್ರಿಯಾಶೀಲತೆ ಸತ್ತು ಹೋಗಿದೆ. ಅಲ್ಲಿಯ ಜನಕ್ಕೆ ಇನ್ನೊಬ್ಬರ ಸಮಸ್ಯೆ ಕೇಳಲು ಸಮಯವಿಲ್ಲ. ಹಣಗಳಿಕೆಯೊಂದೇ ಗುರಿ. ಶಾಂತಿ– ನೆಮ್ಮದಿ ಎಂಬುದು ಇಲ್ಲವೇ ಇಲ್ಲ. ಒತ್ತಡದಿಂದ ಬದುಕುವ ಜನರೇ ಹೆಚ್ಚು. ನಗು ಎಂಬುದು ತಿಳಿದೇ ಇಲ್ಲ. ಇದು ಪ್ರಾದೇಶಿಕ ಸಂಸ್ಕೃತಿಯನ್ನು ಅವಲಂಬಿಸಿದೆ. ಭಾರತ ಸಂಸ್ಕೃತಿಯ ಶ್ರೀಮಂತಿಕೆಯನ್ನು ಹೊಂದಿದೆ. ಹಾಗಾಗಿ, ಇಲ್ಲಿನ ಜನರೂ ಕೂಡ ಹಾಗೇ ಇದ್ದಾರೆ' ಎನ್ನುತ್ತಾರೆ ಸುಸಾನ್ನ.

ಹೆಣ್ಣು ಮಕ್ಕಳು ಸೀರೆ ಉಡುವ ಪರಿಗೆ ಮಾರುಹೋಗಿದ್ದಾರೆ ಸುಸಾನ್ನ. ತಮ್ಮ ದೇಶದಲ್ಲಿ ಗಂಡಸರು– ಹೆಂಗಸರು ಉಡುವ ಬಟ್ಟೆಗಳಿಗೆ ವ್ಯತ್ಯಾಸವಿಲ್ಲ. ಆದರೆ, ಇಲ್ಲಿ ಇಬ್ಬರಿಗೂ ಪ್ರತ್ಯೇಕ ದಿರಿಸು ಇರುವುದನ್ನು ಕಂಡು ಬೆರಗಾಗಿದ್ದಾರೆ. ಒಮ್ಮೆ ಹೆಣ್ಣುಮಗಳೊಬ್ಬಳು ಸೀರೆ ಉಟ್ಟುಕೊಂಡಿದ್ದನ್ನು ನೋಡಿ ಹೊಸ ಬಗೆಯ ಉಡುಪು ಎಂದುಕೊಂಡಿದ್ದರು. ಮರುದಿನ ಅದೇ ಸೀರೆಯನ್ನು ಆಕೆ ತೊಳೆದು ಒಣಗಲು ಹರಡಿದಾಗ ಇಷ್ಟುದ್ದದ ಬಟ್ಟೆ ಹೇಗೆ ಉಟ್ಟುಕೊಂಡಿದ್ದರು ಎಂಬ ವಿಸ್ಮಯಕ್ಕೆ ಒಳಗಾಗಿದ್ದರು. 'ಸೀರೆ ನನಗೆ ಈಗಲೂ ಕೌತುಕದ ಉಡುಗೆ' ಎಂದು ನಗುತ್ತಾರೆ ಸುಸಾನ್ನ.

ಇಲ್ಲಿನ ಸಸ್ಯಾಹಾರಿ ಊಟವೂ ಅವರಿಗೆ ಅಚ್ಚುಮೆಚ್ಚು. 'ಇಲ್ಲಿನ ಆಹಾರ ಪದ್ಧತಿ ದೇಹಕ್ಕೆ ಶಕ್ತಿ ನೀಡುತ್ತದೆ. ಉಲ್ಲಾಸದಿಂದ ಇರಿಸುತ್ತದೆ. ಭಾರತದ ನಂಟು ಬೆಳೆಸಿಕೊಂಡಾಗಿನಿಂದ ಇಲ್ಲಿಯ ಆಹಾರ ಪದ್ಧತಿಯನ್ನೇ ಅನುಸರಿಸುತ್ತಿದ್ದೇನೆ. ಮಾಂಸಾಹಾರ ತ್ಯಜಿಸಿದ್ದೇನೆ' ಎನ್ನುತ್ತಾರೆ ಸುಸನ್ನಾ.

■ ಸುಮಾ ಬಿ.